## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 22 ಎಂಪಿಎಸ್ 2005

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 12-12-2006

## ತಿ ದ್ದೋ ಲೆ

ದಿನಾಂಕ 20-07-2004ರ ಸುತ್ತೋಲೆ ಸಂಖ್ಯೆ: ಇಡಿ 5 ಎಸ್ಎಂಸಿ 2002ರ ಪುಟ 2 ರಲ್ಲಿನ ಕ್ರಮ ಸಂಖ್ಯೆ: 4ರ ನಮೂದು ಈ ಕೆಳಕಂಡಂತೆ ಇದೆ:-

*" ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 50 ರಷ್ಟು ಭಾಷಾ / ಮತೀಯ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲೆ (admissions) ಮಾಡಿಕೊಳ್ಳತಕ್ಕದ್ದು"*

ಸದರಿ ನಮೂದನ್ನು ಕೆಳಕಂಡಂತೆ ಬದಲಾಯಿಸಿ ಓದಿಕೊಳ್ಳತಕ್ಕದ್ದು;

*"ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ಆಯಾಯಾ ಭಾಷಾ /ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯಾ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯಾ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು, ಆಯಾಯ ವರ್ಗದ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಕನಿಷ್ಠ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು"*

(ಎಂ.ಎನ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

---

ಸಿ8(3)ಶಾಶಿಅ:ಸ್ಪಷ್ಟೀಕರಣ-6/06-07

ದಿನಾಂಕ: 24-12-2006

ಮೇಲ್ಕಂಡ ಸರ್ಕಾರದ ತಿದ್ದೋಲೆ ಪ್ರತಿಯನ್ನು ರವಾನಿಸುತ್ತಾ, ಅದರಂತೆ ಕ್ರಮ ಕೈಗೊಂಡು ಪ್ರಸ್ತಾವನೆ ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು(ಪ್ರೌಢ ಶಿಕ್ಷಣ)

ಗೆ,

ಜಿಲ್ಲೆಯ ಎಲ್ಲಾ ಉಪನಿರ್ದೇಶಕರುಗಳಿಗೆ.

# ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ :-* ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಬಡ್ತಿ, ಮರಣ ಇತ್ಯಾದಿಯ ಕಾರಣ ಗಳಿಗಾಗಿ ಉದ್ಭವಿಸಿರುವ (ಅನುದಾನಕ್ಕೆ ಒಳಪಡಿಸಲಾಗಿದ್ದ) ಖಾಲಿ ಹುದ್ದೆಗಳನ್ನು ಮಿತವ್ಯಯ ಆದೇಶಗಳನ್ನು ಸಡಿಲಿಸಿ ತುಂಬಿಕೊಳ್ಳಲು ಅನುಮತಿ ನೀಡಲು ಹಾಗೂ ಅದಕ್ಕೆ ಅನುದಾನ ಸಹಿತ ಅನುಮೋದನೆ ನೀಡಲು ಅಲ್ಪಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಕನಿಷ್ಠ ಶೇಕಡ 50ರಷ್ಟು ವಿದ್ಯಾರ್ಥಿಗಳು ಸಂಬಂಧಿಸಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು (ಸಂದರ್ಭಾನುಸಾರ ಭಾಷಾ ಅಥವಾ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು) ಎಂಬ ಷರತ್ತಿನ ಬಗ್ಗೆ.

*ಓದಲಾಗಿದೆ:-* (1) ದಿನಾಂಕ 12-4-2006ರ ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಎಸ್‌ಇಪಿ 2006.

(2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ದಿನಾಂಕ 5-9-2006ರ ಪತ್ರ ಸಂಖ್ಯೆ: ಸಿ8[3] ಖಾ.ಹು.ಭ.ಸೇ.ಅ: 06:2006-2007.

(3) ದಿನಾಂಕ 22-11-2006ರ ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಎಸ್‌ಇಪಿ 2006.

-0-

*ಪ್ರಸ್ತಾವನೆ:*

1. ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಬಡ್ತಿ, ಮರಣ ಇತ್ಯಾದಿಯ ಕಾರಣಗಳಿಗಾಗಿ ಉದ್ಭವಿಸಿರುವ (ಅನುದಾನಕ್ಕೆ ಒಳಪಡಿಸಲಾಗಿದ್ದ), ಕ್ರಮವಾಗಿ 2106 ಮತ್ತು 282 (ಒಟ್ಟು 2388) ಖಾಲಿ ಹುದ್ದೆಗಳನ್ನು, ಮಿತವ್ಯಯ ಆದೇಶಗಳನ್ನು ಸಡಿಲಿಸಿ, ತುಂಬಿಕೊಳ್ಳಲು ಅನುಮತಿ ನೀಡಲು ಹಾಗೂ ಅದಕ್ಕೆ ಅನುದಾನ [illegible]

ಪೂರೈಸಬೇಕಾದ ಷರತ್ತು ಮತ್ತು ನಿಬಂಧನೆಗಳನ್ನು, ಮೇಲೆ (1)ರಲ್ಲಿ ಓದಲಾದ ದಿನಾಂಕ 12-4-2006ರ ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಎಸ್‌ಇಪಿ 2006ರನ್ವಯ ನಿಗದಿಪಡಿಸಲಾಗಿದೆ. ಆ ಆದೇಶದ ಅನುಬಂಧ-1ರಲ್ಲಿನ ಕ್ರಮ ಸಂಖ್ಯೆ(4)ರನ್ವಯ, ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಅಲ್ಲದೇ, ಅಲ್ಪಸಂಖ್ಯಾತರ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ

ಶಾಲೆಗಳಲ್ಲಿ ಆಯಾಯಾ ಅಲ್ಪ ಸಂಖ್ಯಾತರ ವರ್ಗದವರ ಕನಿಷ್ಠ ಪ್ರಾತಿನಿಧ್ಯತೆಯ ಬಗ್ಗೆ ಈ ಕೆಳಕಂಡಂತೆ ಷರತ್ತನ್ನು ವಿಧಿಸಲಾಗಿದೆ :-

> ***"ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಮೀಸಲಾತಿ :*** "......ಅಲ್ಪಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಕನಿಷ್ಠ ಶೇಕಡ 50ರಷ್ಟು ವಿದ್ಯಾರ್ಥಿಗಳು ಸಂಬಂಧಿಸಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು. (ಸಂದರ್ಭಾನುಸಾರ ಭಾಷಾ ಅಥವಾ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು). "

2. ಹಿಂದಿನ ಕಂಡಿಕೆಯಲ್ಲಿ ಉಲ್ಲೇಖಿಸಲಾದ ಷರತ್ತುಗಳ ಪೂರೈಕೆ ಎಲ್ಲಾ ಪ್ರಕರಣಗಳಲ್ಲೂ ಸಾಧ್ಯವಾಗುತ್ತಿಲ್ಲ ಹಾಗೂ ಇದರ ಪರಿಣಾಮವಾಗಿ ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಬಡ್ತಿ, ಮರಣ ಇತ್ಯಾದಿಯ ಕಾರಣಗಳಿಗಾಗಿ ಉದ್ಭವಿಸಿರುವ (ಅನುದಾನಕ್ಕೆ ಒಳಪಡಿಸಲಾಗಿದ್ದ) ಖಾಲಿ ಹುದ್ದೆಗಳನ್ನು, ಮಿತವ್ಯಯ ಆದೇಶಗಳನ್ನು ಸಡಿಲಿಸಿ ತುಂಬಿಕೊಳ್ಳಲು ಅನುಮತಿ ನೀಡಲು ಸರ್ಕಾರ ದಿನಾಂಕ 12-4-2006ರ ಸದರಿ ಆದೇಶದನ್ವಯ ಆಸ್ಪದ ಕಲ್ಪಿಸಿದ್ದರೂ ಸಹ ಅವುಗಳನ್ನು ತುಂಬಲು ಅನುಮತಿ ನೀಡಲು ಸಾಧ್ಯವಾಗುತ್ತಿಲ್ಲವೆಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಅವರ, ಮೇಲೆ (2)ರಲ್ಲಿ ಓದಲಾದ ದಿನಾಂಕ 8-6-2006ರ ಪತ್ರದನ್ವಯ ತಿಳಿಸಿರುತ್ತಾರೆ ಹಾಗೂ ಆ ಷರತ್ತುಗಳ ಸಡಿಲಿಕೆಯ ಬಗ್ಗೆ ಅವಕಾಶವಿದೆಯೇ? ಎಂಬ ಬಗ್ಗೆ ಮರು ಪರಿಶೀಲಿಸಲು ಸರ್ಕಾರವನ್ನು ಕೋರಿರುತ್ತಾರೆ.

3. ಸದರಿ ಷರತ್ತನ್ನು ಅಂದರೆ, ಅಲ್ಪಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಕನಿಷ್ಠ ಶೇಕಡ 50ರಷ್ಟು ವಿದ್ಯಾರ್ಥಿಗಳು ಸಂಬಂಧಿಸಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು (ಸಂದರ್ಭಾನುಸಾರ ಭಾಷಾ ಅಥವಾ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು) ಎಂಬ ಷರತ್ತನ್ನು ಪೂರೈಸಲು ಸಾಧ್ಯವಾಗದೇ ಇರುವ ಕಾರಣಗಳ ಪೈಕಿ ಅಲ್ಲಿರುವ ಪೋಷಕ (ಫೀಡರ್) ಗ್ರಾಮಗಳಲ್ಲಿ ಸಂಬಂಧಿಸಿದ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ಜನಾಂಗದ ಜನಸಂಖ್ಯೆ ನಿಗದಿತ ಶೇಕಡ ಪ್ರಮಾಣಕ್ಕಿಂತ ಕಡಿಮೆ ಇರುವುದು ಒಂದು ಕಾರಣವಾಗಿರಬಹುದು. ಆದರೆ, ಸುತ್ತಮುತ್ತಲಿನ ಗ್ರಾಮಗಳಲ್ಲಿ, ಸಂಬಂಧಿಸಿದ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ಜನಾಂಗದ ಜನಸಂಖ್ಯೆ ರಾಜ್ಯಮಟ್ಟದಲ್ಲಿ ನಿಗದಿತ ಶೇಕಡ ಪ್ರಮಾಣಕ್ಕಿಂತ ಕಡಿಮೆಯಿದ್ದುದರಿಂದ, ಸದರಿ ಷರತ್ತಿನ ಪೂರೈಕೆಯಿಂದ ಸಂಪೂರ್ಣ ವಿನಾಯಿತಿ ನೀಡುವುದು ಸೂಕ್ತವಲ್ಲ.

4. ಆಯುಕ್ತರ ಸದರಿ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಹಾಗೂ ಕಂಡಿಕೆ-3ರಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶಿಸಿದೆ.

5. ಮೇಲೆ (1)ರಲ್ಲಿ ಓದಲಾದ ದಿನಾಂಕ 12-4-2006ರ ಸರ್ಕಾರದ ಆದೇಶದ ಅನುಬಂಧ-1ರಲ್ಲಿನ ಕ್ರಮ ಸಂಖ್ಯೆ(4)ರನ್ವಯ, (ಅದನ್ನು ಮೇಲಿನ ಕಂಡಿಕೆ-1ರಲ್ಲಿ ಉದ್ಧರಿಸಲಾಗಿದ್ದು), ಅಲ್ಪಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಕನಿಷ್ಠ ಶೇಕಡ 50ರಷ್ಟು ವಿದ್ಯಾರ್ಥಿಗಳು ಸಂಬಂಧಿಸಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು (ಸಂದರ್ಭಾನುಸಾರ ಭಾಷಾ ಅಥವಾ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು) ಎಂಬ ಷರತ್ತಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಉಪಬಂಧಗಳನ್ನು ಭಾಗಶ: ಮಾರ್ಪಡಿಸಿ, ಈ ಕೆಳಕಂಡಂತೆ ಆದೇಶಿಸಿದೆ :-

(1) ನಿಗದಿಪಡಿಸಿದ ಸದರಿ ಪ್ರಮಾಣದಲ್ಲಿ, ಅಂದರೆ, ಅಲ್ಪ ಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಸಂಬಂಧಿಸಿದ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದವರು ಕನಿಷ್ಠ ಶೇಕಡ 50 ರಷ್ಟು ವಿದ್ಯಾರ್ಥಿಗಳು ಇಲ್ಲದೇ ಇದ್ದಲ್ಲಿ, ಅವರಿಗೆ ಈ ಕೆಳಕಂಡಂತೆ ಕನಿಷ್ಠ ಪ್ರಾತಿನಿಧ್ಯತೆಯನ್ನು ನೀಡತಕ್ಕದ್ದು:-

(i) ಆಯಾಯಾ ಅನುದಾನಿತ ಖಾಸಗಿ ಶಾಲೆ ಅಥವಾ ಪದವಿ ಪೂರ್ವ ಕಾಲೇಜಿಗೆ ಪೋಷಕ (feeder) ಶಾಲೆಗಳು ಇರುವ ಪ್ರದೇಶದ ವ್ಯಾಪ್ತಿಯೊಳಗೆ ಇರುವ ಗ್ರಾಮ / ನಗರದಲ್ಲಿರುವ, ಸಂಬಂಧಿಸಿದ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದವರ ಜನ ಸಂಖ್ಯೆಯ ಶೇಕಡಾವಾರಿಗೆ ಅನುಗುಣವಾಗಿ ದಾಖಲಾತಿಯಲ್ಲಿ ಅಂತಹ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯತೆ ನೀಡತಕ್ಕದ್ದು;

(ii) ಮೇಲಿನ (i)ರ ಉದ್ದೇಶಕ್ಕಾಗಿ 2001ರ ಜನಗಣತಿಯ ಅಂಕಿ ಅಂಶಗಳನ್ನು ಉಪಯೋಗಿಸತಕ್ಕದ್ದು. ಅಂದರೆ, ಅಲ್ಪ ಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆ ನಡೆಸುವ ಆಯಾಯಾ ಅನುದಾನಿತ ಖಾಸಗಿ ಶಾಲೆ ಅಥವಾ ಪದವಿ ಪೂರ್ವ ಕಾಲೇಜಿನ ಫೀಡರ್ ಶಾಲೆಗಳು ಇರುವ ಪ್ರದೇಶದ ವ್ಯಾಪ್ತಿಯೊಳಗೆ ಇರುವ ಗ್ರಾಮ / ನಗರದಲ್ಲಿರುವ ಸಂಬಂಧಿಸಿದ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ಜನಾಂಗದ ಜನ ಸಂಖ್ಯೆ ಎಷ್ಟು ಇದೆ ಹಾಗೂ ಆ ಫೀಡರ್ ಶಾಲೆಗಳು ಇರುವ ಪ್ರದೇಶದ ವ್ಯಾಪ್ತಿಯೊಳಗೆ ಇರುವ ಪ್ರದೇಶದಲ್ಲಿ ಅವರ ಜನ ಸಂಖ್ಯೆಯ ಶೇಕಡಾವಾರು ಎಷ್ಟು ಇದೆ ಎಂಬ ಬಗ್ಗೆ 2001ರ ಜನಗಣತಿಯ ಅಂಕಿ ಅಂಶಗಳಿಂದ ಖಚಿತಪಡಿಸಿಕೊಳ್ಳತಕ್ಕದ್ದು.

6. ಕಂಡಿಕೆ-5ರನ್ವಯ ತೆಗೆದುಕೊಳ್ಳಬೇಕಾದ ಕ್ರಮವು ಈ ಕೆಳಕಂಡ ಷರತ್ತಿಗೆ ಒಳಪಟ್ಟಿರುತ್ತದೆ:- ಕಂಡಿಕೆ-5ರ ಪರಿಶೀಲನೆಯ ಜೊತೆಗೆ ಆ ಪ್ರದೇಶದಲ್ಲಿನ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳಿಗೆ ಈ ಕೆಳಕಂಡ ಪ್ರಮಾಣದಲ್ಲಿ ಪ್ರವೇಶವನ್ನು ಕೊಡಬೇಕು:-

| | | |
|---|---|---|
| ಪ.ಜಾ. - (ಪರಿಶಿಷ್ಟ ಜಾತಿ) | ಶೇಕಡ | 15 |
| ಪ.ಪಂ. - (ಪರಿಶಿಷ್ಟ ಪಂಗಡ) | ಶೇಕಡ | 3 |
| ಇ.ಹಿಂ.ವ..-(ಇತರೆ ಹಿಂದುಳಿದ ವರ್ಗಗಳು) | ಶೇಕಡ | 32 |
| ಒಟ್ಟು: | ಶೇಕಡ | 50 |

ಇದು, ಮೇಲೆ (3)ರಲ್ಲಿ ಓದಲಾದ ದಿನಾಂಕ 22-11-2006ರ ಆದೇಶದನ್ವಯ ನಿಗದಿಪಡಿಸಿದ (ಮಾರ್ಪಡಿಸಿದ) ಉಪಬಂಧಗಳಿಗೆ ಒಳಪಟ್ಟಿರುತ್ತದೆ. ಮುಂದುವರೆದು, ಫೀಡರ್ ಶಾಲೆಗಳು ಇರುವ ಆ ಪ್ರದೇಶದಲ್ಲಿ ಪರಿಶಿಷ್ಠ ಜಾತಿಗೆ ಸೇರಿದ ಮಕ್ಕಳು ಲಭ್ಯವಿಲ್ಲದಿದ್ದಲ್ಲಿ ಪರಿಶಿಷ್ಠ ಪಂಗಡದ ಮಕ್ಕಳಿಗೆ, ಪರಿಶಿಷ್ಠ ಪಂಗಡದ ಮಕ್ಕಳು ಲಭ್ಯವಿಲ್ಲದಿದ್ದಲ್ಲಿ ಪರಿಶಿಷ್ಠ ಜಾತಿಯ ಮಕ್ಕಳಿಗೆ ಹಾಗೂ ಅದೇ ರೀತಿ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳಿಗೆ ಸೇರಿದ ಮಕ್ಕಳು ಸಿಗದಿದ್ದಲ್ಲಿ ಆ ಮಕ್ಕಳ ಬದಲಿಗೆ ಇತರೆ ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಮಕ್ಕಳಿಗೆ ಪ್ರವೇಶ ಕೊಡತಕ್ಕದ್ದು.

9. ಈ ರೀತಿಯಾಗಿ ವಿವರವಾದ ಕ್ರಮಗಳನ್ನು ಕೈಗೊಂಡ ಮೇಲೆಯೇ, ಪ್ರತಿಯೊಂದು ಪ್ರಕರಣವನ್ನು ಪರಿಶೀಲಿಸಿ, ಮೇಲಿನ ಕಂಡಿಕೆ-1ರಲ್ಲಿ ಉಲ್ಲೇಖಿಸಲಾದ ಷರತ್ತನ್ನು ಪ್ರಕರಣವಾರು ಸಡಿಲಿಸಬಹುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿದ್ಧಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

*ಗೆ:*

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಸರ್ಕಾರದ ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರೌಢ ಶಿಕ್ಷಣ-ಎ ಶಾಖೆಗೆ ಒದಗಿಸಬೇಕೆಂದು ಕೋರಿದೆ.

ಪ್ರತಿ:

(1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

(2) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.

(3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.

(4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

(5) ನಿರ್ದೇಶಕರು(ಪ್ರಾಥಮಿಕ ಶಿಕ್ಷಣ),ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

(6) ನಿರ್ದೇಶಕರು(ಪ್ರೌಢ ಶಿಕ್ಷಣ),ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

(7) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.

(8) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು / ಜಂಟಿ / ಉಪ ನಿರ್ದೇಶಕರುಗಳು / ಕ್ಷೇತ್ರ ಶಿಕ್ಷಣಾಧಿಕಾರಿಗಳು.

(9) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ.

(10) ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿ.

(11) ಎಲ್ಲಾ ಅಪರ / ಸಹ / ಉಪ / ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು.

12) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

13) ಶಿಕ್ಷಣ ಇಲಾಖೆಯ ವಾರ್ಷಿಕ ಸಂಕಲನದಲ್ಲಿ(Annual Compemdium) ಸೇರಿಸಲು ಸಾಮಾನ್ಯ-2 ಶಾಖೆಗೆ.

ಸಿ8(3)ಖಾ.ಹು.ಭ.ಸೇ.ಅ.06/2006–07

ದಿನಾಂಕ: 29–12–2006

ಸರ್ಕಾರದ ಆದೇಶ ಸಂಖ್ಯೆ ಇಡಿ 380 ಎಸ್.ಇ.ಪಿ. 2006 ಬೆಂಗಳೂರು, ದಿನಾಂಕ: 27–12–2006 ರ ಆದೇಶದಲ್ಲಿನ ಸೂಚನೆಯಂತೆ ಪರಿಶೀಲಿಸಿ, ಅದರಂತೆ ಕ್ರಮವಹಿಸಿ ಆಡಳಿತ ಮಂಡಳಿಯ ಪ್ರಸ್ತಾವನೆ ಪಡೆದು ಪರಿಶೀಲಿಸಿ ಈ ಕಛೇರಿಗೆ ಕಳುಹಿಸುವ ಬಗ್ಗೆ ಕ್ರಮವಹಿಸಲು ತಿಳಿಸಿದೆ.

ನಿರ್ದೇಶಕರು (ಪ್ರೌಢ ಶಿಕ್ಷಣ)

ಗೆ,

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :-** ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಬಡ್ತಿ, ಮರಣ ಇತ್ಯಾದಿಯ ಕಾರಣಗಳಿಗಾಗಿ ಉದ್ಭವಿಸಿರುವ (ಅನುದಾನಕ್ಕೆ ಒಳಪಡಿಸಲಾಗಿದ್ದ) ಖಾಲಿ ಹುದ್ದೆಗಳನ್ನು ಮಿತವ್ಯಯ ಆದೇಶಗಳನ್ನು ಸಡಿಲಿಸಿ ತುಂಬಿಕೊಳ್ಳಲು ಅನುಮತಿ ನೀಡುವ ಹಾಗೂ ಅದಕ್ಕೆ ಅನುದಾನ ಸಹಿತ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:-** (1) ದಿನಾಂಕ 12-4-2006ರ ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಎಸ್‌ಇಪಿ 2006.

(2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ದಿನಾಂಕ 5-9-2006ರ ಪತ್ರ ಸಂಖ್ಯೆ: ಸಿ8[3] ಖಾ.ಹು.ಭ.ಸೇ.ಅ: 06:2006-2007

-0-

**ಪ್ರಸ್ತಾವನೆ:**

1. ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಬಡ್ತಿ, ಮರಣ ಇತ್ಯಾದಿಯ ಕಾರಣಗಳಿಗಾಗಿ ಉದ್ಭವಿಸಿರುವ (ಅನುದಾನಕ್ಕೆ ಒಳಪಡಿಸಲಾಗಿದ್ದ), ಕ್ರಮವಾಗಿ 2106 ಮತ್ತು 282 (ಒಟ್ಟು 2388) ಖಾಲಿ ಹುದ್ದೆಗಳನ್ನು, ಮಿತವ್ಯಯ ಆದೇಶಗಳನ್ನು ಸಡಿಲಿಸಿ, ತುಂಬಿಕೊಳ್ಳಲು ಅನುಮತಿ ನೀಡಲು ಹಾಗೂ ಅದಕ್ಕೆ ಅನುದಾನ ಸಹಿತ ಅನುಮೋದನೆ ಪಡೆಯಲು ಇಚ್ಛಿಸುವ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರೈಸಬೇಕಾದ ಷರತ್ತು ಮತ್ತು ನಿಬಂಧನೆಗಳನ್ನು, ಮೇಲೆ (1)ರಲ್ಲಿ ಓದಲಾದ ದಿನಾಂಕ 12-4-2006ರ ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಎಸ್‌ಇಪಿ 2006ರನ್ವಯ ನಿಗದಿಪಡಿಸಲಾಗಿದೆ. ಆ ಆದೇಶದ ಅನುಬಂಧ-1ರಲ್ಲಿನ ಕ್ರಮ ಸಂಖ್ಯೆ(4)ರನ್ವಯ, ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಹಾಗೂ ಅಲ್ಪಸಂಖ್ಯಾತರ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಶಾಲೆಗಳಲ್ಲಿ ಆಯಾಯಾ ಅಲ್ಪ ಸಂಖ್ಯಾತರ ವರ್ಗದವರ ಕನಿಷ್ಠ ಪ್ರಾತಿನಿಧ್ಯತೆಯ ಬಗ್ಗೆ ಈ ಕೆಳಕಂಡಂತೆ ಷರತ್ತನ್ನು ವಿಧಿಸಲಾಗಿದೆ :-

"**ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಮೀಸಲಾತಿ :** ಸರ್ಕಾರ ಕಾಲಕಾಲಕ್ಕೆ ಹೊರಡಿಸಿದ ಆದೇಶಗಳ ಪ್ರಕಾರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ ಹಾಗೂ ಹೆಣ್ಣು ಮಕ್ಕಳಿಗಾಗಿ ದಾಖಲಾತಿಯಲ್ಲಿ ಸೀಟುಗಳನ್ನು ಮೀಸಲಿಡತಕ್ಕದ್ದು. ಅಲ್ಪಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಕನಿಷ್ಠ ಶೇಕಡ 50ರಷ್ಟು ವಿದ್ಯಾರ್ಥಿಗಳು ಸಂಬಂಧಿಸಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು. (ಸಂದರ್ಭಾನುಸಾರ ಭಾಷಾ ಅಥವಾ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರತಕ್ಕದ್ದು).

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಕೊರತೆಯಾಗಿದ್ದಲ್ಲಿ , ನಿಗದಿತ ಕನಿಷ್ಠ ಮಟ್ಟಕ್ಕೆ ಅವರ ದಾಖಲಾತಿಯನ್ನು ಮುಂದಿನ ವರ್ಷದಲ್ಲಿ ಮಾಡಲು ಸಂಬಂಧಿಸಿದ ಸಂಸ್ಥೆ ವಿಶೇಷ ಪ್ರಯತ್ನವನ್ನು ನಡೆಸಿ, ಅದನ್ನು ಗಳಿಸಿದ ನಂತರ ಅನುದಾನಿತ ಹುದ್ದೆಗಳ ಎದುರು ಉಂಟಾದ ರಿಕ್ತ ಸ್ಥಾನಗಳನ್ನು ತುಂಬಲು ಅನುಮತಿಯನ್ನು ಕೋರಬಹುದು."

2. ಹಿಂದಿನ ಕಂಡಿಕೆಯಲ್ಲಿ ಉಲ್ಲೇಖಿಸಲಾದ ಷರತ್ತುಗಳ ಪೂರೈಕೆ ಎಲ್ಲಾ ಪ್ರಕರಣಗಳಲ್ಲೂ ಸಾಧ್ಯವಾಗುತ್ತಿಲ್ಲ ಹಾಗೂ ಇದರ ಪರಿಣಾಮವಾಗಿ ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಬಡ್ತಿ, ಮರಣ ಇತ್ಯಾದಿಯ ಕಾರಣಗಳಿಗಾಗಿ ಉದ್ಭವಿಸಿರುವ (ಅನುದಾನಕ್ಕೆ ಒಳಪಡಿಸಲಾಗಿದ್ದ) ಖಾಲಿ ಹುದ್ದೆಗಳನ್ನು, ಮಿತವ್ಯಯ ಆದೇಶಗಳನ್ನು ಸಡಿಲಿಸಿ ತುಂಬಿಕೊಳ್ಳಲು ಅನುಮತಿ ನೀಡಲು ಸರ್ಕಾರ ದಿನಾಂಕ 12-4-2006ರ ಸದರಿ ಆದೇಶದನ್ವಯ ಆಸ್ಪದ ಕಲ್ಪಿಸಿದ್ದರೂ ಸಹ ಅವುಗಳನ್ನು ತುಂಬಲು ಅನುಮತಿ ನೀಡಲು ಸಾಧ್ಯವಾಗುತ್ತಿಲ್ಲವೆಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಅವರ, ಮೇಲೆ (2)ರಲ್ಲಿ ಓದಲಾದ ದಿನಾಂಕ 8-6-2006ರ ಪತ್ರದನ್ವಯ ತಿಳಿಸಿರುತ್ತಾರೆ ಹಾಗೂ ಆ ಷರತ್ತುಗಳ ಸಡಿಲಿಕೆಯ ಬಗ್ಗೆ ಅವಕಾಶವಿದೆಯೇ? ಎಂಬ ಬಗ್ಗೆ ಮರು ಪರಿಶೀಲಿಸಲು ಸರ್ಕಾರವನ್ನು ಕೋರಿರುತ್ತಾರೆ.

3. ಸದರಿ ಷರತ್ತನ್ನು ಪೂರೈಸಲು ಸಾಧ್ಯವಾಗದೇ ಇರುವ ಕಾರಣಗಳು ಈ ಕೆಳಕಂಡಂತೆ ಇರಬಹುದು :-

(1) ಅಲ್ಲಿರುವ ಪೋಷಕ (ಫೀಡರ್) ಗ್ರಾಮಗಳಲ್ಲಿ ನಿಗದಿತ ಶೇಕಡ ಪ್ರಮಾಣಕ್ಕಿಂತ ಈ ಜನಾಂಗದ ಜನಸಂಖ್ಯೆ ಕಡಿಮೆ ಇರಬಹುದು;

(2) ನಿಗದಿತ ಶೇಕಡ ಪ್ರಮಾಣದಷ್ಟು ಜನಸಂಖ್ಯೆ ಇದ್ದರೂ ಸಹ, ಪ್ರವೇಶಕ್ಕಾಗಿ ಅರ್ಜಿಗಳನ್ನು ಸಲ್ಲಿಸದೇ ಇರಬಹುದು;

(3) ಅರ್ಜಿಯನ್ನು ಸಲ್ಲಿಸಿದ್ದರೂ ಸಹ, ಅವರ ಪ್ರವೇಶಾತಿ ಅರ್ಜಿಗಳನ್ನು ನೊಂದಣಿ ಮಾಡದೇ ನಿರಾಕರಿಸಿರಬಹುದು;

(4) ಈ ಗ್ರಾಮಗಳಲ್ಲಿ ಶೇಕಡ ಪ್ರಮಾಣ ಜನಸಂಖ್ಯೆ ಇದ್ದರೂ ಸಹ, ಈ ಜನಾಂಗದ ಮಕ್ಕಳ ದಾಖಲಾತಿ (enrolment) ಅಥವಾ ನೊಂದಣಿಯಾಗದೇ ಇರಬಹುದು;

(5) ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ ಆಗದೇ ಇರುವುದರಿಂದ, ಪ್ರೌಢ ಶಾಲೆಗಳಲ್ಲಿ ದಾಖಲಾತಿ ಆಗದೇ ಇರಬಹುದು;

(6) ಈ ಜನಾಂಗದ ಜನರು ರಾಜ್ಯಮಟ್ಟಕ್ಕಿಂತ ಆ ಗ್ರಾಮಗಳಲ್ಲಿ ಹೆಚ್ಚಾಗಿಯಿದ್ದರೂ, ಪ್ರಾಥಮಿಕ ಶಾಲೆಗಳಿಗೆ ಬರುವ ಮಕ್ಕಳ ಸಂಖ್ಯೆ ಕೂಡ ಅತೀ ಕಡಿಮೆಯಾಗಿರಬಹುದು.

ಈ ಮುಂತಾದ ಮೇಲ್ಕಂಡ ಅಂಶಗಳಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಜನಸಂಖ್ಯೆ ರಾಜ್ಯಮಟ್ಟದಲ್ಲಿ ನಿಗದಿತ ಶೇಕಡ ಪ್ರಮಾಣಕ್ಕಿಂತ ಕಡಿಮೆಯಿದ್ದುದರಿಂದ, ಸದರಿ ಷರತ್ತಿನ ಪೂರೈಕೆಯಿಂದ ಸಂಪೂರ್ಣ ವಿನಾಯಿತಿ ನೀಡುವುದು ಸೂಕ್ತವಲ್ಲ.

4. 2001ರ ಜನಗಣತಿಯ ವರದಿಯಲ್ಲಿ ಈ ಜನಾಂಗದ ಪ್ರತಿಶತ ಜನಸಂಖ್ಯೆ ಫೀಡರ್ ಗ್ರಾಮಗಳಲ್ಲಿ ಇಲ್ಲವೆಂಬ ಕಾರಣಕ್ಕಾಗಿ ಆ ಗ್ರಾಮಗಳಲ್ಲಿ ಶಾಲೆಗೆ ಹೋಗುವ ಮಕ್ಕಳ ಪ್ರಮಾಣವು ನಿಗದಿತ ಪ್ರತಿಶತಕದಷ್ಟು ಇಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಜನಸಂಖ್ಯೆಯು ರಾಜ್ಯದ ಸರಾಸರಿ ಪ್ರತಿಶತಕ್ಕಿಂತಲೂ ಕಡಿಮೆಯಿದ್ದರೂ, ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಶಾಲೆಗೆ ಹೋಗುತ್ತಿರಬಹುದು. ಒಂದು ವೇಳೆ ಜನಸಂಖ್ಯೆಯೇ ರಾಜ್ಯದ ಸರಾಸರಿ ಪ್ರತಿಶತಕ್ಕಿಂತ ಹೆಚ್ಚಿಗೆಯಿದ್ದರೂ, ಇಂತಹ ಗ್ರಾಮಗಳಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಕಡಿಮೆಯಿರಬಹುದು. ಆದುದರಿಂದ ಜನಸಂಖ್ಯೆ ಮತ್ತು ಮಕ್ಕಳ ಪ್ರವೇಶಾತಿಗಳ ಸಂಖ್ಯೆಗಳ ನಡುವೆ ಇರುವ ಸಂಬಂಧವನ್ನು ಬಹಳ ಆಳವಾಗಿ ಅಭ್ಯಸಿಸಬೇಕಾಗುತ್ತದೆ. ಇದಲ್ಲದೇ ಜನಗಣತಿಯಲ್ಲಿ ತೋರಿಸಿರುವ ಜನಸಂಖ್ಯೆಯನ್ನು ಮಾತ್ರ ಪರಿಗಣಿಸುವುದಲ್ಲದೇ, ಇಂತಹ ಪ್ರದೇಶಗಳಲ್ಲಿ ಈಗಾಗಲೇ ಪ್ರಾಥಮಿಕ ಶಾಲೆಗಳಲ್ಲಿ ಅಭ್ಯಸಿಸುತ್ತಿರುವ ಮಕ್ಕಳ ಸಂಖ್ಯೆಯನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

5. ಕನಿಷ್ಠ ಪ್ರತಿಶತ ಪ್ರಮಾಣದಷ್ಟೂ ಈ ಜಾತಿಯ ಜನಾಂಗದ ಮಕ್ಕಳು ಶಾಲೆಗಳಲ್ಲಿ ಸಿಗುತ್ತಿಲ್ಲವೆಂದಾದರೆ, ಹಾಗಾದರೆ ಯಾವ ಮಕ್ಕಳಿಗೆ ಶಾಲೆಗಳಲ್ಲಿ ಪ್ರವೇಶ ಕಲ್ಪಿಸಿರುವರು ಮತ್ತು ಆ ಪ್ರವೇಶಗಳನ್ನು ಆಧಾರವಾಗಿಟ್ಟುಕೊಂಡು, ಶಿಕ್ಷಕರುಗಳ ಹುದ್ದೆಗಳನ್ನು ತುಂಬಲು ಸರ್ಕಾರದ ಅನುಮೋದನೆಯನ್ನು ಪಡೆಯಲು ಬೇಡಿಕೆ ಹೇಗೆ ಸಲ್ಲಿಸಿರುತ್ತಿರುವರು ಎಂಬುದನ್ನು ವಿಷದವಾಗಿ ಶೋಧಿಸಬೇಕಾಗುತ್ತದೆ.

6. ಆಯುಕ್ತರ ಸದರಿ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಹಾಗೂ ಕಂಡಿಕೆ-3,4 ಮತ್ತು 5ರಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶಿಸಿದೆ.

(P)

**ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಎಸ್‌ಇಬಿ 2006, ಬೆಂಗಳೂರು, ದಿನಾಂಕ 22-11-2006.**

7. ಮೇಲೆ (1)ರಲ್ಲಿ ಓದಲಾದ ದಿನಾಂಕ 12-4-2006ರ ಸರ್ಕಾರದ ಆದೇಶದ ಅನುಬಂಧ-1ರಲ್ಲಿನ ಕ್ರಮ ಸಂಖ್ಯೆ(4)ರನ್ವಯ, (ಅದನ್ನು ಮೇಲಿನ ಕಂಡಿಕೆ-1ರಲ್ಲಿ ಉದ್ಧರಿಸಲಾಗಿದ್ದು) ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಉಪಬಂಧಗಳನ್ನು ಭಾಗಶ: ಮಾರ್ಪಡಿಸಿ, ಈ ಕೆಳಕಂಡಂತೆ ಆದೇಶಿಸಿದೆ:-

(1) ನಗರ ಪ್ರದೇಶಗಳಲ್ಲಿ ಇರುವ ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಕಂಡಿಕೆ-1ರಲ್ಲಿ ಉದ್ಧರಿಸಲಾದ

ಮೀಸಲಾತಿಗೆ ಸಂಬಂಧಿಸಿದ ಉಪಬಂಧವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. (ಈ ಉದ್ದೇಶಕ್ಕಾಗಿ ನಗರ ಪ್ರದೇಶ ಅಂದರೆ, ಜಿಲ್ಲಾ ಕೇಂದ್ರ ಸ್ಥಾನ, ತಾಲ್ಲೂಕು ಕೇಂದ್ರ ಸ್ಥಾನ, ನಗರ ಪಾಲಿಕೆ, ನಗರ ಪುರಸಭೆ, ಪಟ್ಟಣ ಪುರಸಭೆ ಹಾಗೂ ಪಟ್ಟಣ ಪಂಚಾಯತಿಗೆ ಸೇರಿದ ಪ್ರದೇಶ);

(2) ಗ್ರಾಮೀಣ ಪ್ರದೇಶಗಳಲ್ಲಿನ, ಅಂದರೆ, ಕ್ರಮ ಸಂಖ್ಯೆ (1)ರಲ್ಲಿ ಉಲ್ಲೇಖಿಸಲಾದ ನಗರ ಪ್ರದೇಶದ ಹೊರಗಿನ ಪ್ರದೇಶದಲ್ಲಿರುವ ಅನುದಾನಿತ ಖಾಸಗಿ ಶಾಲೆಗಳಿಗೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಮೀಸಲಾತಿಯನ್ನು ಅನುಸರಿಸತಕ್ಕದ್ದು :-

(ಅ) ಮೀಸಲಾತಿಯ ಉದ್ದೇಶಕ್ಕಾಗಿ ಗುರುತಿಸಲಾದ ವರ್ಗಗಳು ಹಾಗೂ ಅವರಿಗಾಗಿ ನಿಗದಿಪಡಿಸಲಾದ ಮೀಸಲಾತಿಯ ಪ್ರಮಾಣ ಈ ಕೆಳಕಂಡಂತೆ ಇರುತ್ತದೆ :-

| | | | |
|---|---|---|---|
| I | - ಪ್ರವರ್ಗ - I | ಶೇಕಡ | 4 |
| II(ಎ) | - ಪ್ರವರ್ಗ - II(ಎ) | ಶೇಕಡ | 15 |
| II(ಬಿ) | - ಪ್ರವರ್ಗ - II(ಬಿ) | ಶೇಕಡ | 4 |
| III(ಎ) | - ಪ್ರವರ್ಗ - III(ಎ) | ಶೇಕಡ | 4 |
| III(ಬಿ) | - ಪ್ರವರ್ಗ - III(ಬಿ) | ಶೇಕಡ | 5 |
| ಪ.ಜಾ. | - (ಪರಿಶಿಷ್ಟ ಜಾತಿ) | ಶೇಕಡ | 15 |
| ಪ.ಪಂ. | - (ಪರಿಶಿಷ್ಟ ಪಂಗಡ) | ಶೇಕಡ | 3 |
| ಸಾ.ಅ. | - (ಸಾಮಾನ್ಯ ಅರ್ಹತೆ) | ಶೇಕಡ | 50 |
| | | ಒಟ್ಟು | 100 |

ಆದರೆ, ನಿಗದಿಪಡಿಸಿದ ಸದರಿ ಪ್ರಮಾಣದಲ್ಲಿ, ಆಯಾಯಾ ಮೀಸಲಾತಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಇಲ್ಲದಿದ್ದ ಪಕ್ಷದಲ್ಲಿ ಅವರಿಗೆ ಈ ಕೆಳಕಂಡಂತೆ ಕನಿಷ್ಠ ಪ್ರಾತಿನಿಧ್ಯತೆಯನ್ನು ನೀಡತಕ್ಕದ್ದು:-

(i) ಆಯಾಯಾ ಅನುದಾನಿತ ಖಾಸಗಿ ಶಾಲೆ ಅಥವಾ ಪದವಿ ಪೂರ್ವ ಕಾಲೇಜಿಗೆ ಫೀಡರ್ ಶಾಲೆಗಳು ಇರುವ ಪ್ರದೇಶದ ವ್ಯಾಪ್ತಿಯೊಳಗೆ ಇರುವ ಗ್ರಾಮಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನ ಸಂಖ್ಯೆಯ ಶೇಕಡಾವಾರಿಗೆ ಅನುಗುಣವಾಗಿ ದಾಖಲಾತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೀಸಲಾತಿಯನ್ನು ಅನುಸರಿಸಿ ಅವರಿಗೆ ಪ್ರಾತಿನಿಧ್ಯತೆ ನೀಡತಕ್ಕದ್ದು;

(ii) ಮೇಲಿನ (ಅ)ರ ಉದ್ದೇಶಕ್ಕಾಗಿ 2001ರ ಜನಗಣತಿಯ ಅಂಕಿ ಅಂಶಗಳನ್ನು ಉಪಯೋಗಿಸತಕ್ಕದ್ದು. ಅಂದರೆ, ಅಯಾಯಾ ಅನುದಾನಿತ ಖಾಸಗಿ ಶಾಲೆ ಅಥವಾ ಪದವಿ ಪೂರ್ವ ಕಾಲೇಜಿನ ಫೀಡರ್ ಶಾಲೆಗಳು ಇರುವ ಪ್ರದೇಶದ ವ್ಯಾಪ್ತಿಯೊಳಗೆ

ಇರುವ ಗ್ರಾಮಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನ ಸಂಖ್ಯೆ ಎಷ್ಟು ಇದೆ ಹಾಗೂ ಆ ಫೀಡರ್ ಶಾಲೆಗಳು ಇರುವ ಪ್ರದೇಶದ ವ್ಯಾಪ್ತಿಯೊಳಗೆ ಇರುವ ಗ್ರಾಮಗಳಲ್ಲಿ ಅವರ ಜನ ಸಂಖ್ಯೆಯ ಶೇಕಡಾವಾರು ಎಷ್ಟು ಇದೆ ಎಂಬ ಬಗ್ಗೆ 2001ರ ಜನಗಣತಿಯ ಅಂಕಿ ಅಂಶಗಳಿಂದ ಖಚಿತಪಡಿಸಿಕೊಳ್ಳತಕ್ಕದ್ದು.

8. ಕಂಡಿಕೆ-7ರನ್ವಯ ತೆಗೆದುಕೊಳ್ಳಬೇಕಾದ ಕ್ರಮವು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ:-

(i) ಕರ್ನಾಟಕ ರಾಜ್ಯದಲ್ಲಿ, ಪ್ರತಿ ಹಳ್ಳಿಯಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಜನಸಂಖ್ಯೆಯು, ಒಟ್ಟು ಜನಸಂಖ್ಯೆಯ ಸರಾಸರಿ ಪ್ರತಿಶತ 85ರಷ್ಟಿರುತ್ತದೆಂದು ಜನಗಣತಿಯ ವರದಿಯು ದಾಖಲಿಸುತ್ತದೆ. ಆದುದರಿಂದ, ಕಂಡಿಕೆ-7(2)ರ ಪರಿಶೀಲನೆಯಿಂದ ಆ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮಕ್ಕಳು ಲಭ್ಯವಿಲ್ಲದಿದ್ದಲ್ಲಿ, ಪರಿಶಿಷ್ಟ ಪಂಗಡದ ಮಕ್ಕಳಿಂದಲೂ, ಪರಿಶಿಷ್ಟ ಪಂಗಡದ ಮಕ್ಕಳು ಲಭ್ಯವಿಲ್ಲದಿದ್ದಲ್ಲಿ, ಪರಿಶಿಷ್ಟ ಜಾತಿಯ ಮಕ್ಕಳಿಗೆ ಪ್ರವೇಶ ನೀಡಬೇಕಾಗುತ್ತದೆ. ಅದೇ ರೀತಿ, ಕಂಡಿಕೆ-7(2)ರ ಪರಿಶೀಲನೆಯಿಂದ ಆ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಸಿಗದಿದ್ದಲ್ಲಿ, ಆ ಮಕ್ಕಳ ಬದಲಿಗೆ ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಮಕ್ಕಳಿಗೆ ಪ್ರವೇಶವನ್ನು ಕೊಡಬೇಕು;

(ii) ಇತರೆ ಹಿಂದುಳಿದ ವರ್ಗಗಳ ಜನರ ಸಂಖ್ಯೆಬಗ್ಗೆ ಜನಗಣತಿಯಲ್ಲಿ ಅಂಕಿ ಅಂಶಗಳಿರುವುದಿಲ್ಲವಾದ್ದರಿಂದ ಫೀಡರ್ ಶಾಲೆಗಳಲ್ಲಿನ ಇತರೆ ಹಿಂದುಳಿದ ವರ್ಗಗಳ ಮಕ್ಕಳ ಶೇಕಡಾವಾರು ಅಂಕಿ ಅಂಶಗಳನ್ನು ಪಡೆದು ಅದಕ್ಕನುಗುಣವಾಗಿ ಅದಕ್ಕಿಂತ ಕಡಿಮೆ ಇರದಂತೆ ಪ್ರಾತಿನಿಧ್ಯತೆ ನೀಡತಕ್ಕದ್ದು.

(iii) ಈ ರೀತಿಯಾಗಿ ವಿವರವಾದ ಕ್ರಮಗಳನ್ನು ಕೈಗೊಂಡ ಮೇಲೆಯೇ, ಪ್ರತಿಯೊಂದು ಪ್ರಕರಣವನ್ನು ಪರಿಶೀಲಿಸಿ, ಮೇಲಿನ ಕಂಡಿಕೆ-1ರಲ್ಲಿ ಉಲ್ಲೇಖಿಸಲಾದ ಷರತ್ತನ್ನು ಪ್ರಕರಣವಾರು ಸಡಿಲಿಸಬಹುದು.

9. ಈ ಆದೇಶವನ್ನು ಸಮಾಜ ಕಲ್ಯಾಣ ಇಲಾಖೆ ಅದರ ದಿನಾಂಕ 14-11-2006ರ ಟಿಪ್ಪಣಿ ಸಂಖ್ಯೆ: ಸಕಇ 160 ಎಸ್ಎಡಿ 2006ರ ಮೂಲಕ ನೀಡಿದ ಸಹಮತಿಯೊಂದಿಗೆ ಹೊರಡಿಸಲಾಗಿದೆ.

10. ಮೇಲಿನ ಕಂಡಿಕೆ-1ರಲ್ಲಿ ಉಲ್ಲೇಖಿಸಲಾದ, ಅಲ್ಪಸಂಖ್ಯಾತರ ಸಂಸ್ಥೆಯೆಂದು ಮಾನ್ಯತೆ ಪಡೆದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಕನಿಷ್ಠ ಶೇಕಡ 50ರಷ್ಟು ವಿದ್ಯಾರ್ಥಿಗಳು ಸಂಬಂಧಿಸಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರಬೇಕೆಂಬ

ಉಪಬಂಧವನ್ನು ಸರ್ಕಾರ ಪುನರ್ ಪರಿಶೀಲಿಸುತ್ತಿದೆ. ಅದಾದ ನಂತರ, ಅದನ್ನು ಪರಿಷ್ಕರಿಸಲು ಸರ್ಕಾರ ತೀರ್ಮಾನಿಸಿದಲ್ಲಿ, ಅದರ ಕುರಿತು ಪ್ರತ್ಯೇಕವಾಗಿ ಆದೇಶವನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಸರ್ಕಾರದ ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರೌಢ ಶಿಕ್ಷಣ-ಎ ಶಾಖೆಗೆ ಒದಗಿಸಬೇಕೆಂದು ಕೋರಿದೆ.

**ಪ್ರತಿ:**

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
2) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
5) ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6) ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
7) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
8) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು / ಜಂಟಿ / ಉಪ ನಿರ್ದೇಶಕರುಗಳು / ಕ್ಷೇತ್ರ ಶಿಕ್ಷಣಾಧಿಕಾರಿಗಳು.
9) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ.
10) ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿ.
11) ಎಲ್ಲಾ ಅಪರ / ಸಹ / ಉಪ / ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು.
12) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.
13) ಶಿಕ್ಷಣ ಇಲಾಖೆಯ ವಾರ್ಷಿಕ ಸಂಕಲನದಲ್ಲಿ(Annual Compemdium) ಸೇರಿಸಲು ಸಾಮಾನ್ಯ-2 ಶಾಖೆಗೆ.

ಉಪಬಂಧವನ್ನು ಸರ್ಕಾರ ಪುನರ್ ಪರಿಶೀಲಿಸುತ್ತಿದೆ. ಅದಾದ ನಂತರ, ಅದನ್ನು ಪರಿಷ್ಕರಿಸಲು ಸರ್ಕಾರ ತೀರ್ಮಾನಿಸಿದಲ್ಲಿ, ಅದರ ಕುರಿತು ಪ್ರತ್ಯೇಕವಾಗಿ ಆದೇಶವನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಸಿ8(3)ಶಾಶಿಅ:ಹು.ಭ.ನೇ.ಅ.ಸ್ವ–6/06–07

ದಿನಾಂಕ: 19–12–2006

ಸರ್ಕಾರದ ಆದೇಶ ಇಡಿ 46 ಎಸ್.ಇ.ಪಿ. 2006 ಬೆಂ. ದಿ: 22–11–2006 ರ ಸರ್ಕಾರದ ಆದೇಶದಲ್ಲಿನ ಸೂಚನೆಯಂತೆ ಪರಿಶೀಲಿಸಿ, ಆದರಂತೆ ಕ್ರಮವಹಿಸಿ ಆಡಳಿತ ಮಂಡಳಿಯ ಮೂಲಕ ಪ್ರಸ್ತಾವನೆ ಪಡೆದು ಪರಿಶೀಲಿಸಿ ಈ ಕಛೇರಿಗೆ ಕಳುಹಿಸುವ ಬಗ್ಗೆ ಕ್ರಮವಹಿಸಲು ತಿಳಿಸಿದೆ.

ನಿರ್ದೇಶಕರು(ಪ್ರೌಢ ಶಿಕ್ಷಣ)

ಗೆ,

ಜಿಲ್ಲೆಯ ಎಲ್ಲಾ ಉಪನಿರ್ದೇಶಕರುಗಳಿಗೆ,